# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 40

ಸದಸ್ಯರ ಹೆಸರು : ಶ್ರೀ. ಪ್ರತಾಪ್ ಸಿಂಹ ನಾಯಕ್. ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.

ಉತ್ತರಿಸಬೇಕಾದ ದಿನಾಂಕ : 04.03.2025

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಮನಗರ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ "ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ" ವತಿಯಿಂದ ಎಷ್ಟು ಜನ ತೆಂಗು ಬೆಳೆಗಾರರು ವಿವಿಧ ರೀತಿಯ ನೆರವು, ಸಹಾಯಧನ ಮತ್ತು ಸೌಲಭ್ಯಗಳನ್ನು ಪಡೆದಿದ್ದಾರೆ;</td><td>ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ರಾಮನಗರ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ 6,963 ರೈತರಿಗೆ ಈ ಕೆಳಕಾಣಿಸಿದಂತೆ ವಿವಿಧ ರೀತಿಯ ನೆರವು, ಸಹಾಯಧನ ಮತ್ತು ಸೌಲಭ್ಯಗಳನ್ನು ನೀಡಲಾಗಿರುತ್ತದೆ:-
<table>
<tr><th>ಕ್ರ. ಸಂ</th><th>ವರ್ಷ</th><th>ಕಾರ್ಯಕ್ರಮ</th><th>ಭೌತಿಕ (ಹೆ)</th><th>ಆರ್ಥಿಕ (ರೂ.ಲಕ್ಷ ಗಳಲ್ಲಿ)</th><th>ಫಲಾನುಭವಿ ಗಳಸಂಖ್ಯೆ</th></tr>
<tr><td>1</td><td>2022-23</td><td>ಹೊಸ ತೆಂಗು ಮರುನಾಟಿ ಮತ್ತು ಪುನಶ್ಚೇತನ ಕಾರ್ಯಕ್ರಮ</td><td>74.00</td><td>33.088</td><td>101</td></tr>
<tr><td rowspan="2">2</td><td rowspan="2">2023-24</td><td>ಹೊಸ ಪ್ರಾತ್ಯಕ್ಷಿತೆ ತಾಕುಗಳ ಕಾರ್ಯಕ್ರಮ</td><td>3715</td><td>650.063</td><td>5252</td></tr>
<tr><td>ತೆಂಗು ಮರುನಾಟಿ ಮತ್ತು ಪುನಶ್ಚೇತನ ನಿರ್ವಹಣೆ ಕಾರ್ಯಕ್ರಮ</td><td>74</td><td>6.475</td><td>101</td></tr>
<tr><td>3</td><td>2024-25</td><td>ಪ್ರಾತ್ಯಕ್ಷಿತೆ ತಾಕುಗಳ ನಿರ್ವಹಣೆ ಕಾರ್ಯಕ್ರಮ</td><td>915</td><td>160.11</td><td>1509</td></tr>
</table>
</td></tr>
<tr><td>ಆ)</td><td>ಪ್ರತಿ ಫಲಾನುಭವಿ ಪಡೆದಿರುವ ವಿವಿಧ ರೀತಿಯ ನೆರವು, ಸಹಾಯಧನ ಮತ್ತು ಸೌಲಭ್ಯಗಳು ಯಾವುವು: (ಸಂಪೂರ್ಣ ವಿವರಗಳನ್ನು ಒದಗಿಸುವುದು)</td><td>ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲಾದ ಈ ಕೆಳಕಂಡ ಕಾರ್ಯಕ್ರಮಗಳಡಿ ಫಲಾನುಭವಿ ರೈತರು ಸೌಲಭ್ಯಗಳನ್ನು ಪಡೆದಿರುತ್ತಾರೆ.</td></tr>
</table>

| | | |
|---|---|---|
| | | **1. ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಕಾರ್ಯಕ್ರಮ:-**<br><br>ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆಯಲ್ಲಿ ರೋಗ/ ಕೀಟ ಭಾದಿತ ತೆಂಗಿನ ತೋಟಗಳಲ್ಲಿ ಸಮಗ್ರ ವೈಜ್ಞಾನಿಕ ಬೇಸಾಯ ಪದ್ಧತಿಗಳ ನಿರ್ವಹಣೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ, ಅಂತರ/ಮಧ್ಯಂತರ ಬೆಳೆಗಳ ಪದ್ಧತಿಗಳನ್ನು ಅಳವಡಿಸುವುದು, ತೆಂಗಿನ ಗಿಡಗಳ ಬುಡಗಳ ಪಾತಿಯಲ್ಲಿ ನೀರು ಮತ್ತು ತೇವಾಂಶ ಸಂರಕ್ಷಣೆಗಾಗಿ ತೆಂಗಿನಸಿಪ್ಪೆ/ ಕೃಷಿ ತ್ಯಾಜ್ಯಗಳನ್ನು ತುಂಬುವುದು ಹಾಗೂ ತೆಂಗಿನ ಗರಿಗಳನ್ನು ಹೊದಿಸುವುದರಿಂದ ತೇವಾಂಶ ಸಂರಕ್ಷಣೆ ವಿಧಾನಗಳನ್ನು ಅನುಸರಿಸಲು ಫಲಾನುಭವಿ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.17,500/- ರಂತೆ ಸಹಾಯಧನ ಒದಗಿಸಲಾಗುತ್ತಿದೆ.<br><br>**2. ಮರುನಾಟಿ ಮತ್ತು ಪುನಃಶ್ಚೇತನ ಹಾಗೂ ನಿರ್ವಹಣೆ ಕಾರ್ಯಕ್ರಮ:-**<br><br>ತೆಂಗಿನ ತೋಟಗಳಲ್ಲಿ ವಯಸ್ಸಾದ / ಅನುತ್ಪಾದಕ / ರೋಗ ಮತ್ತು ಕೀಟಭಾದಿತ / ಒಣಗಿದ ಮರಗಳನ್ನು ಕತ್ತರಿಸಿ ತೆಗೆದು, ಉಳಿದ ಮರಗಳಿಗೆ ಪೋಷಕಾಂಶಗಳನ್ನು ಒದಗಿಸಿ, ಪುನಃ ಹೊಸದಾಗಿ ಸಸಿಗಳನ್ನು ನೆಡಲು ಪ್ರತಿ ಹೆಕ್ಟೇರ್‌ಗೆ ರೂ. 44,750/-ಗಳಂತೆ ಮೊದಲನೇ ವರ್ಷಕ್ಕೆ ಹಾಗೂ ಎರಡನೇ ವರ್ಷದ ನಿರ್ವಹಣೆ ಕಾರ್ಯಕ್ರಮಕ್ಕೆ ಪ್ರತಿ ಹೆಕ್ಟೇರ್‌ಗೆ ರೂ. 8,750/- ರಂತೆ ಸಹಾಯಧನವನ್ನು ಫಲಾನುಭವಿ ರೈತರಿಗೆ ಒದಗಿಸಲಾಗುತ್ತಿದೆ. |
| ಇ) | ವಿವಿಧ ರೀತಿಯ ನೆರವು, ಸಹಾಯಧನ ಮತ್ತು ಸೌಲಭ್ಯಗಳನ್ನು ಪಡೆಯಲು ಪ್ರತಿಯೊಬ್ಬ ಫಲಾನುಭವಿಯು ಸಲ್ಲಿಸಿರುವ ದಾಖಲಾತಿಗಳು ಯಾವುವು? (ಪ್ರತಿಯೊಬ್ಬ ಫಲಾನುಭವಿಯು ಸಲ್ಲಿಸಿರುವ ಎಲ್ಲಾ ಸಂಪೂರ್ಣ ದಾಖಲಾತಿಗಳ ಪ್ರತಿಗಳನ್ನು ಪ್ರತ್ಯೇಕವಾಗಿ ಒದಗಿಸುವುದು) | ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ವಿವಿಧ ಕಾರ್ಯಕ್ರಮಗಳಡಿ ಸೌಲಭ್ಯಗಳನ್ನು ಪಡೆಯಲು ರೈತರು ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅದರಲ್ಲಿ Unique Farmer ID (FID) ನಮೂದಿಸಿರಬೇಕು, FID ನೋಂದಣಿ ಪಡೆಯಲು ಪಹಣಿ, ಆಧಾರ್, ಬ್ಯಾಂಕ್ ಖಾತೆ ವಿವರ, ಜಾತಿ ಪ್ರಮಾಣ ಪತ್ರ, ಮೊಬೈಲ್ ಸಂಖ್ಯೆ ಇತ್ಯಾದಿ ವಿವರಗಳನ್ನು ಸಲ್ಲಿಸಬೇಕು. FID ಇರುವ ರೈತರ ವಿವರಗಳನ್ನು FRUITS ತಂತ್ರಾಂಶದಿಂದ ಪಡೆಯಲಾಗುತ್ತಿದ್ದು, ಫಲಾನುಭವಿ ರೈತರ ಸಂಪೂರ್ಣ ವಿವರಗಳನ್ನು CD ಯಲ್ಲಿ ಒದಗಿಸಲಾಗಿದೆ. |

HORTI 49 HGM 2025

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು